**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 21-11 -2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಶ್ರೀ.MJS ವಕೀಲರವರಿಂದಃ**

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಕುಟುಂಬದದಲ್ಲಿ 4 ಜನರು ಇದ್ದಾರೆ. ನಾನು ವ್ಯವಸಾಯ ಮಾಡುತ್ತಿದ್ದು, ನನಗೆ 3 ವರೆ ಎಕರೆ ಜಮೀನು ಇದೆ. ಸದರಿ ಜಮೀನಿನ ಎಲ್ಲಾ ದಾಖಲಾತಿಗಳು ನನ್ನ ಹೆಸರಿನಲ್ಲಿ ಮತ್ತು ನನ್ನ ತಂದೆಯ ಹೆಸರಿನಲ್ಲಿದೆ. ನನ್ನ ತಂದೆಯೊಂದಿಗೆ ಇಬ್ಬರು ಒಡಹುಟ್ಟಿದವರು. ನನ್ನ ತಂದೆಗೆ ನಾನು ಒಬ್ಬನೇ ಮಗ. ನಾನು ವಾರ್ಷಿಕವಾಗಿ ಸುಮಾರು 2 ಲಕ್ಷ ಸಂಪಾದನೆ ಆಗುತ್ತದೆ. ತಿಂಗಳಿಗೆ ಸುಮಾರು 1-1 ವರೆ ಸಾವಿರ ಖರ್ಚಾಗುತ್ತದೆ.

ಆರೋಪಿ ಸುಮಾರು 6-6 ವರೆ ಹಿಂದಿನಿಂದ ನನಗೆ ಪರಿಚಯ. ಆರೋಪಿಯು ನನ್ನ ಅಳಿಯ ಸಂತೋಷ್ ಮೂಲಕ ಪರಿಚಯವಾಗಿದ್ದು, ಸದರಿಯವರು ನನ್ನ ಅಳಿಯನೊಂದಿಗೆ ಟಯೋಟಾ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ಆರೋಪಿಯು ಸಾಲ ಕೇಳಿದ ವಿಚಾರವನ್ನು ನನ್ನ ಅಳಿಯನಿಗೆ ಹೇಳಿದ್ದೇನೆ. 2021 ರ ಮೇ ನಲ್ಲಿ ಆರೋಪಿಯು ಸಾಲ ಕೇಳಿದ್ದರು. ಸದರಿಯವರು ಸಾಲ ಕೇಳಿದ 1 ವಾರದ ನಂತರ ನಾನು ಸಾಲ ನೀಡಿರುತ್ತೇನೆ. ನಾನು ಆರೋಪಿಗೆ ಸಾಲ ನೀಡಿದಾಗ ನನ್ನ ಹೆಂಡತಿ, ನನ್ನ ತಂದೆ ಇದ್ದರು. ಸದರಿ ವಿಚಾರವನ್ನು ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದ್ದೆನೆ.

ಆರೋಪಿಯ ಮನೆಯನ್ನು ಒಂದು ಬಾರಿ ನೋಡಿದ್ದೇನೆ. ಆರೋಪಿಯು ಸಾದೊಳಲು ಗ್ರಾಮದವರು. ಅಲ್ಲಿ ಆರೋಪಿಯನ್ನು ನೋಡಿದ್ದೇನೆ. ನೋಟೀಸ್ ನ್ನು ಸಾದೊಳಲು ಗ್ರಾಮಕ್ಕೆ ಕಳುಹಿಸಿರುತ್ತೇನೆ. ಪ್ರಕರಣವನ್ನು ಸಾದೊಳಲು ಗ್ರಾಮದ ವಿಳಾಸ ನೀಡಿ ಹೂಡಿದ್ದೀರಾ ಎಂದರೆ ಸಾಕ್ಷಿ ಊರು ಸ್ವಲ್ಪ ಗೊಂದಲದಲ್ಲಿದೆ ಎನ್ನುತ್ತಾರೆ.

ಆರೋಪಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ಆರೋಪಿಯ ತಂದೆಯ ಹೆಸರನ್ನು ನೊಟೀಸ್ ನಲ್ಲಿ ಆರೋಪಿಯ ಆಧಾರ್ ಕಾರ್ಡ್ ನೋಡಿ ಹೇಳಿರುತ್ತೇನೆ. ಸದರಿ ಆಧಾರ್ ಕಾರ್ಡ್ ನ್ನು ಹಾಜರುಪಡಿಸಿಲ್ಲ. ಆರೋಪಿಯ ತಂದೆಯ ಹೆಸರು ಏನಿತ್ತು ಎಂದು ನೆನಪಿಲ್ಲ. ಆರೋಪಿಯೇ ಪರಿಚಯವಿಲ್ಲದ ಕಾರಣ ಸದರಿಯವರ ಪೂರ್ಣ ವಿಳಾಸ ಮತ್ತು ಪೂರ್ಣ ವಿವರ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಎಷ್ಟು ಸಂಬಳ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಕೈ ಸಾಲ ಮತ್ತು ಮನೆ ಸಾಲ ತೀರಿಸಲು ಸಾಲ ಕೇಳಿದ್ದರು. ನನ್ನ ಬಳಿ 5 ಲಕ್ಷ ಇತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಆರೋಪಿಯು 15-20 ದಿನಗಳ ನಂತರ ವಾಪಸ್ಸು ಮಾಡುವುದಾಗಿ ಹೇಳಿದ್ದರು. ದಿ 17-09-2021 ರಲ್ಲಿ ಆರೋಪಿ ಚೆಕ್ ನೀಡಿರುತ್ತಾರೆ. ಆರೋಪಿಗೆ ಸಾಲ ನೀಡಿದಾಗಲೇ ದಾಖಲಾತಿಯನ್ನು ಪಡೆಯಲು ತೊಂದರೆ ಇತ್ತೆ ಎಂದರೆ ಹಣ ಕೊಡುತ್ತೇನೆ ಎಂದು ಹೇಳಿದ್ದರಿಂದ ಕೇಳಿಲ್ಲ, ನಂತರ ಹಣ ಹಿಂದಿರುಗಿಸುವಂತೆ ಕೇಳಿದ್ದರಿಂದ ಚೆಕ್ ನೀಡಿದ್ದಾರೆ ಎನ್ನುತ್ತಾರೆ.

ಆರೋಪಿಯ ಮನೆಯಲ್ಲಿ ಯಾರು ಯಾರು ಇದ್ದಾರೆ ಎಂದು ತಿಳಿದುಕೊಂಡಿಲ್ಲ. ನನ್ನ ಅಳಿಯ ಸಂತೋಷ್ ರವರ ಇತರ ಸ್ನೇಹಿತರು ಪರಿಚಯವಿಲ್ಲ. ನಿಪಿ-1 ರ ಚೆಕ್ ನ್ನು ಬಸವರಾಜು ಎಂಬುವವರಿಗೆ ಆರೋಪಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿಯವರಿಗೆ ತಿಂಗಳಿಗೆ 50-60 ಸಾವಿರ ಸಂಬಳ ಬರುವುದರಿಂದ

ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಕಬ್ಬು, ಬಾಳೆ, ಟಮೋಟೋ,ಭತ್ತ ಬೆಳೆಯುತ್ತೇನೆ. ಕಬ್ಬುನ್ನು ನಾನು ಪ್ಯಾಕ್ಟರಿಗೆ ಸರಬರಾಜು ಮಾಡುವುದರಿಂದ ಅದರ ಆದಾಯವು ಖಾತೆಗೆ ವರ್ಗಾವಣೆಯಾಗುತ್ತದೆ ಎಂದರೆ ಸರಿ. ಸದರಿ ಕಬ್ಬು ಸರಬರಾಜು ಮಾಡುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು